## ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ, ಜೇವರಗಿ

**PC No**.2/2021

**ಪಿ.ಸಾ-1**

**ಸಾಕ್ಷಿಗೆ ದಿನಾಂಕ 05.07.2022 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | ಃ | ಜೇಬಾ ಪರ್ವಿನ |
| ಗಂಡನ ಹೆಸರು | ಃ | ಅಲ್ಲಾಬಕ್ಷ ಮಲಘಾಣ |
| ವಯಸ್ಸು | ಃ | 24 ವರ್ಷ |
| ಉದ್ಯೋಗ | ಃ | ಮನೆಗೆಲಸ |
| ವಾಸಸ್ಥಳ | ಃ | ಜೇವರ್ಗಿ |

**ಸಾಕ್ಷಿಯ ಸ್ವ-ಇಚ್ಛೆ ಹೇಳಿಕೆ**

ದಿನಾಂಕ 25.08.2019 ರಂದು ನನ್ನ ಮದುವೆ 1 ನೇ ಆರೋಪಿ ಅಲ್ಲಾಬಕ್ಷ ರವರೊಂದಿಗೆ ದೇವರ ಹಿಪ್ಪರಗಿಯಲ್ಲಿ ಆಗಿರುತ್ತದೆ. ಮದುವೆಯಾದ ನಂತರ ನಾನು ಗಂಡನ ಮನೆಯಾದ ದೇವರ ಹಿಪ್ಪರಗಿಗೆ ವಾಸಿಸಲು ಹೋಗಿದ್ದೆ. ಮದುವೆಯಾದ ನಂತರ ಸುಮಾರು 20-ದಿನಗಳ ಕಾಲ ನಾನು ಗಂಡನ ಮನೆಯಾದ ದೇವರ ಹಿಪ್ಪರಗಿಯಲ್ಲಿದ್ದೆ. ನನ್ನ ಮಾವ ಮೌಲಾಲಿ, ಅತ್ತೆ ಲಾಲಬಿ, ನನ್ನ ಗಂಡ ಅಲ್ಲಾಬಕ್ಷ ಎಲ್ಲರೂ ಸೇರಿ ಮಾಹಾರಾಷ್ಟ್ರ ರಾಜ್ಯದ ಸತಾರ ಜಿಲ್ಲೆಯ ಕಂಡೋಬಾಪಾಲಿ ಗ್ರಾಮಕ್ಕೆ ಜೀವನೋಪಾಯ ಹುಡುಕಿ ಹೋಗಿರುತ್ತೇವೆ. ನಾವು ಸದರಿ ಕಂಡೋಬಾಪಾಲಿ ಗ್ರಾಮದಲ್ಲಿ ವಾಸವಿದ್ದಾಗ ನನ್ನ ಗಂಡ ಅಲ್ಲಾಬಕ್ಷ ತನ್ನ ತಂದೆ ತಾಯಿ ಮಾತು ಕೇಳಿ ನನಗೆ ಅವಾಚ್ಯ ಶಬ್ದಗಳಿಂದ ಬೈಯುವುದು ಹಾಗೂ ವರದಕ್ಷಿಣೆ ತರುವಂತೆ ಹಿಂಸೆ ನೀಡುತ್ತಿದ್ದ. ನನ್ನ ಗಂಡನ ತಂಗಿಯಾದ ಆಯಿಶಾಬಾನು ಹಾಗೂ ಆಕೆಯ ಗಂಡ ಮಲಿಕಜಾನ ರವರು ಸಹ ಕಂಡೋಬಾಪಾಲಿಯಲ್ಲಿರುವ ಮನೆಗೆ ಬಂದು ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸುವುದು ಹಾಗೂ ವರದಕ್ಷಿಣೆ ತರುವಂತೆ ಒತ್ತಾಯಿಸುತ್ತಿದ್ದರು. ಸದರಿ ಆಯಿಶಾಬಾನು ಹಾಗೂ ಮಲಿಕಜಾನ ರವರು ನನ್ನ ಎಡಗೈಯನ್ನು ಸುಟ್ಟಿರುತ್ತಾರೆ.

ಸದರಿ ಘಟನೆ ಬಗ್ಗೆ ನಾನು ನನ್ನ ಗಂಡನಿಗೆ ಹೇಳಿದಾಗ ನನ್ನ ಗಂಡ ಆಲ್ ಔಟ (ಸೊಳ್ಳೆ ಹೊಡೆಯುವ ಔಷದಿ) ನ್ನು ನನ್ನ ಬಾಯಿಯಲ್ಲಿ ಹಾಕಿರುತ್ತಾನೆ. ನನ್ನ ಗಂಡ ನನಗೆ ಸದರಿ ಕಂಡೋಬಾಪಾಲಿಯಲ್ಲಿರುವ ಮನೆಯಲ್ಲಿ ಬಂದೂಕು ತೆಗೆದುಕೊಂಡು ಸುಡುತ್ತೇನೆ ಎಂದು ಬೆದರಿಕೆ ಹಾಕಿರುತ್ತಾನೆ.

ಸದರಿ ವಿಚಾರವನ್ನು ನಾನು ಬೇರೆಯವರಿಗೆ ಹೇಳಿದರೆ ನನ್ನನ್ನು ಕತ್ತರಿಸಿ ನದಿಯಲ್ಲಿ ಹಾಕುತ್ತೇನೆಂದು ನನ್ನ ಗಂಡ ನನಗೆ ಬೆದರಿಕೆ ಹಾಕಿರುತ್ತಾನೆ. ಆನಂತರ ನಾನು ದಿನಾಂಕ 12.04.2020 ರಂದು ಹೆರಿಗೆಗೋಸ್ಕರ ನನ್ನ ತವರುಮನೆಗೆ ಬಂದಿರುತ್ತೇನೆ. ನಾನು ದಿನಾಂಕ 26.06.2020 ರಂದು ಹೆಣ್ಣುಮಗುವಿಗೆ ಜನ್ಮ ನೀಡಿದ ಕಾರಣ ಆರೋಪಿತರು ನಮ್ಮನ್ನು ನೋಡಲು ಬಂದಿಲ್ಲ. ನಾನು ನನ್ನ ಗಂಡನಿಗೆ ದೂರವಾಣಿ ಮೂಲಕ ಕರೆ ಮಾಡಿದಾಗ ನನ್ನ ಗಂಡ ಅಲ್ಲಾಬಕ್ಷ ಮೇಲೆ ಹೇಳಿದಂತೆ ಕಾರು ಖರೀದಿಸಲು ಹಣ ಬೇಕು ತವರುಮನೆಯಿಂದ ಹಣ ತೆಗೆದುಕೊಂಡು ಬಾ ಎಂದು ಒತ್ತಾಯಿಸುತ್ತಿದ್ದ. ಈ ವಿಚಾರವಾಗಿ ನಾನು ಜೇವರ್ಗಿ ಪೋಲಿಸ ಠಾಣೆಯಲ್ಲಿ ದೂರು ಸಲ್ಲಿಸಿರುತ್ತೇನೆ. ಜೇವರ್ಗಿ ಪೋಲಿಸ ಠಾಣೆಯವರು ನಾನು ನೀಡಿದ ದೂರಿನ ಮೇಲೆ ಯಾವುದೇ ಕ್ರಮ ತೆಗೆದುಕೊಂಡಿಲ್ಲ ದಿನಾಂಕ 10.11.2020 ರಂದು ನನ್ನ ನಾದನಿ ಗಂಡನಾದ ಮಲಿಕಜಾನ ನನ್ನ ಕೆನ್ನೆಗೆ ಕೈಯಿಂದ ಹೊಡೆದಿರುತ್ತಾನೆ. ನನ್ನ ಗಂಡ ಅವಾಚ್ಯ ಶಬ್ದಗಳಾದ ರಂಡಿ, ಚಿನಾಲಿ ಎಂದ ಬೈದು ಚಪ್ಪಲಿಯಿಂದ ನನ್ನ ತಲೆಗೆ ಹೊಡೆದು ಕೂದಲು ಹಿಡಿದು ಜಗ್ಗಾಡಿ ಮನೆಯಿಂದ ಹೊರಗೆ ಹಾಕಿರುತ್ತಾನೆ. ಸದರಿ ಘಟನೆ ನಡೆದ ನಂತರ ಆರೋಪಿತರು ನನ್ನ ಬಳಿ ಯಾರೂ ಬಂದಿಲ್ಲ ಹಾಗೂ ವಿಚಾರಣೆ ಮಾಡಿಲ್ಲ. ಆದ್ದರಿಂದ ಆರೋಪಿಗಳ ವಿರುದ್ಧ ಸೂಕ್ರ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೋರುತ್ತೇನೆ

ನಾನು ಆರೋಪಿತರ ವಿರುದ್ಧ SP Kalaburagi ರವರಿಗೆ ನೀಡಿದ ದೂರಿನ ಸ್ವೀಕೃತಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ನನ್ನ ಆಧಾರಕಾರ್ಡ ಹಾಗೂ ಮದುವೆ ಪ್ರಮಾಣ ಪತ್ರದ ಜೆರಾಕ್ಸ ಪ್ರತಿಗಳನ್ನು ಹಾಜರುಪಡಿಸಿದ್ದೇನೆ ಸದರಿ ದಾಖಲೆಗಳು ಜೆರಾಕ್ಸ ಪ್ರತಿಗಳಾದ ಕಾರಣ ನಿಶಾನೆಗೊಳಿಸಿರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ ಅದೆ.

ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾದಂಡಾಧಿಕಾರಿಗಳು
ಜೇವರಗಿ.

Complainant present.

Sworn statement of the complainant record. Complainant got marked Ex.P1.

For further enquiry/sworn statement by 30-07-2022.

Sr. CJ & JMFC, Jewargi